ದೇಹದೊಳಗೆ ಹೋದಂತೆಲ್ಲ ಗೀತಾಳ ಚಡಪಡಿಕೆ ನಿಂತಿತು.

"ನಿಧಾನವಾಗಿ, ಜೋರಾಗಿ ಉಸಿರು ತೆಗೆದುಕೊಳ್ಳಿ..."

ಗೀತಾಳಿಗೆ ಮೂರು– ನಾಲ್ಕರವರೆಗೆ ಮಾತ್ರ ಹೇಳಲು ಸಾಧ್ಯವಾಯಿತು. ಮಂಪರಿನ ಮಾಯಾ ಲೋಕಕ್ಕಿಳಿಯತೊಡಗಿದ್ದಳು.

"ತುಂಬಾ ನಿದ್ದೆ ಬರ್ತಾ ಇದೆ ಅಲ್ವೇನಮ್ಮ?"

"ಹೂಂ..."

"ಕಣ್ಣು ಬಿಟ್ಟು ನನ್ನತ್ತ ನೋಡಿ... ಎಲ್ಲಿ... ಕಣ್ಣು... ತೆಗೆಯಿರಿ..."

ಗೀತಾಳ ಪ್ರಯತ್ನ ಸಫಲವಾಗಲಿಲ್ಲ.

"ರೆಪ್ಪೆ... ಅಂಟಿಕೊಂಡುಬಿಟ್ಟಿದೆ... ಸ... ರ್..." ಅಮಲಿನಲ್ಲಿದ್ದವಳಂತೆ ತೊದಲುತ್ತಾ ಹೇಳಿದಳು.

"ಗೀತಾ... ನಿನ್ನ ಗಂಡ ಹೆದರಿಸ್ತಾನೇನಮ್ಮಾ?..." ರಾವ್ ನಿಧಾನವಾಗಿ ವಿಷಯಕ್ಕೆ ಬಂದರು.

"ಯಾವ ಗಂಡ?..."

"ನಿನ್ನ ಗಂಡ... ದಿವಾಕರ್ ಕಣಮ್ಮ..."

ಗೀತಾ ಕೆಲವು ಕ್ಷಣ ಮಾತೇ ಆಡಲಿಲ್ಲ. ಏನನ್ನೋ ಹೇಳಲು ತುಟಿಯನ್ನು ತೆರೆದವಳು ಪುನಃ ಮುಚ್ಚಿಕೊಂಡಳು.

"ಗೀತಾ... ನೀನು ಮೊದಲಿನಂತೆ ಆರೋಗ್ಯವಾಗಿ... ನಿನ್ನ ಮಗು... ದಿವಾಕರನೊಂದಿಗೆ ಇರ್ಬೇಕೂಂತ ಆಸೆ ಇದೆಯೋ ಇಲ್ವೋ?..."

"....."

"ದಿವಾಕರ್ ಹುಚ್ಚನಂತಾಗಿಬಿಟ್ಟಿದ್ದಾನೆ... ನನ್ನ ಮಾತು ಹೇಳ್ತೀಯೋ ಇಲ್ವೋ?..."

"ಹೂಂ..." ಆಳದಿಂದ ಬಂದಿತು ಸ್ವರ.

"ಮಗೂನ ಯಾಕೆ ಕೊಲ್ಲೋಕೆ ಹೋಗ್ತೀಯಾ?... ಮಧ್ಯರಾತ್ರಿ ದಿವಾಕರನಿಂದ ತಟ್ಟನೆ ದೂರ ಎದ್ದು ಯಾಕೆ ಹೊರಗೆ ಓಡ್ತೀಯಾ?..."

"ಹೊರಗೆ ಹೋಗದಿದ್ದರೆ ಅವರನ್ನು ಎಲ್ಲಿ ನಾನು ಕೊಂದುಬಿಡ್ತೇನೆಯೋ ಅಂತ ಹೆದರಿಕೆ..."

"ಅಂಥಾದ್ದೇನು ಮಾಡಿದ್ದಾನೆ ನಿನಗವನು? ನಿನಗೆ ಮೋಸ ಮಾಡಿದ್ದಾನೇನು?..."

ಗೀತಾ ತಲೆಯಲುಗಿಸಿದಳು. ಕಣ್ಣಂಚಿನಿಂದ ಕಂಬನಿ ಕಾಣಿಸಿತು.

"ಅವರು... ಅವರು ತುಂಬಾ ಒಳ್ಳೆಯವರು... ಈ ಕೆಟ್ಟ ಪ್ರಪಂಚದಲ್ಲಿ... ಅದೂ ನನ್ನಂತಹ ಪತಿತೆಯ ಜೊತೆ ಇರಕೂಡದು...."

"ಪತಿತೆ!" ಆಶ್ಚರ್ಯದಿಂದ ನುಡಿದರು ರಾವ್.

"ಹೌದು... ಅಯ್ಯೋ.... ನಾನ್ಹೇಗೆ ಹೇಳಲಿ..." ಗೀತಾ ವೇದನೆಯಿಂದ ನರಳಿದಳು.

"ನೀನು ಹೇಳಲೇಬೇಕು... ನಿನ್ನ ಮನಸ್ಸಿನಲ್ಲಿದ್ದುದನ್ನು ಹೊರಗೆ ಹಾಕಲೇಬೇಕು. ಗೀತಾ... ಹೇಳು... ನಿಲ್ಲಿಸಬೇಡಾ..."

ಗೀತಾ... ಮಂಪರಿನಲ್ಲಿ... ಬಡಬಡಿಸುವವಳಂತೆ ಪ್ರಾರಂಭಿಸಿದಳು.

"ನನ್ನ ಡಿಗ್ರಿ ಪದವಿ ಮುಗಿಸಿಕೊಂಡು ಬಂದರೂ ಯಾವ ಪ್ರೇಮ... ಪ್ರಣಯ ಪ್ರಸಂಗಗಳಿಗೂ ಸಿಕ್ಕಿಹಾಕಿಕೊಂಡಿರಲಿಲ್ಲ. ಕಾಲೇಜೊಂದರಲ್ಲಿ ಕೆಲಸ ಸಿಕ್ಕಿತು. ಮನೆಯಿಂದ ದೂರಾಂತ ಕಾಲೇಜಿಗೆ ಹತ್ತಿರದಲ್ಲೇ ವಠಾರವೊಂದರಲ್ಲಿ ಸಣ್ಣ ರೂಮು ಮಾಡಿದೆ. ಇದಕ್ಕೆ ನನ್ನ ಮನೆಯವರ